
# ಸುನೀತ ಸಮಯ



## 5

ಸೆರೆಯಾಗಿಹೆ ಚಕೋರಿ ಹೃದಯಾಪಹಾರಿ
ಮರೆಯಾಗಿಹೆ ಎಲ್ಲಿ ಮನದನ್ನೆ ಮಾಯಕಾರಿ||
ನದಿಯೊಳಗೆ ಸೆಳವಿನಂತೆ ಪ್ರೇಮವೊಂದು ಗಾಳವಂತೆ
ದಯಗೊಂಡ ದೇವರಂತೆ ಮನಹೊಕ್ಕು ಬಂದು ಕುಂತೆ
ಕ್ಷಣ ಕ್ಷಣವು ಮೈಯೇರಿ ಮತ್ತು ಮರೆತೆ ನಾನು ಚಿಂತೆ
ನಡೆದಂತೆ ನಡೆದೆ ನುಡಿದಂತೆ ನುಡಿದೆ ನೆರಳಾಗಿಹೆ ಕಾಂತೆ||
ಹೆಡೆ ಮುರಿಯ ಕಟ್ಟಿ ವೈರಿಗಳನು ಮೆಟ್ಟಿ
ಸುತ್ತೇಳು ಲೋಕಕೆಲ್ಲಾ ಸೋಲುಣಿಸಿದಾ ಜಟ್ಟಿ
ನಾರಿ ಕೈ ಬಳೆಗೆ ಬೆದರಿ ಬಿಟ್ಟ ಕಣ್ಣೋಟಕೆದರಿ
ಪ್ರೇಮಗಾಣವನೊತ್ತು ಗಿರಗಿರ ತಿರುಗುವ ಬುಗುರಿ||
ಗಡಿ ದಾಟಿ ಬಂದೆ ಅಂದು ಗೆರೆ ದಾಟದಾದೆ ಇಂದು
ಯಾವ ಜನುಮದಿಂದಿಳಿದು ಬಂದೆಯೋ ನೀ ಜೀವ ಬಂಧು
ನಿನ್ನ ತಾಗಿ ಹುಲಿತನವ ನೀಗಿ ಹುಲ್ಲೆಯಾಗಿಹೆ ಪ್ರೇಮ ಸಿಂಧು
ಪದ್ಮ ಪತ್ರದಲ್ಲಿ ಅಲುಗುರಿತಿರುವೆನು ನಾನು ಜಲದ ಬಿಂದು||

## 6

ನಾನು ಸುಖಿಯೀ ಹೇಳು ಸಖಿಯೀ ಎಂಥಾ ಬಾಳು ನಂದು
ನೊಂದು ನೋಯುವೆ, ಅಂಜಿ ಬೇಯುವೆ ಎಂಥಾ ಗೋಳು ನಿಂದು||
ಬರುವೆನೆಂದವನು ಬರದೆ ಹೋದನು ಮರೆಯಬಹುದೆ ಇಂದು
ದೇವರಂತಿಹನು ನಿಂತು ನಗುತಿಹನು ಅವಳ ಪ್ರೇಮವ ಕೊಂದು||
ದೂಪವನಾರಿಸಿ ದೀಪವ ನಂದಿಸಿ ಗಾಳಿ ತೂರಿ ಗಂಧವನು
ಕದವನಿಕ್ಕಿರಿ ಕನ್ನಡಿ ಮುಚ್ಚಿರಿ ಹಾದಿಗೆಸೆಯಿರಿ ಆಭರಣವನು
ತೊಳೆಯಿರಿ ಗೋರಂಟಿ ಬಣ್ಣವನು ಕಳಚಿರಿ ಕೊರಳ ಹಾರವನು
ಮನ ಗಾಯಮಾಡಿದನು ಗೆಣೆಕಾರನೆ ಚಂದ್ರ ಸೊಟ್ಟ ಮುಖದವನು
ನಿಂಬೆ ನಂಬಿಸಿತು ಸಿಹಿಯೆಂದು ತಿನ್ನಲು ತಿಳಿಯಿತು ಹುಳಿಯೆಂದು
ಮಾಯದ ಮಾತಿಗೆ ಮರುಳಾದೆ ಹುಲಿಯ ನಂಬಿದೆ ಹುಲ್ಲೆಯೆಂದು
ಕಾಯಲಿ ಬೇಯಲಿ ಕರಗಲಾರೆನು ಕಹಿ ಪಾಠವನು ಮರೆಯಲಾರೆನು
ಪ್ರೇಮದಾಳದ ಆಳತೆಯನು ಗಂಡೆಂದೆಂದಿಗೂ ಅರಿಯಲಾರನು||

